ಕರ್ನಾಟಕ ಸರ್ಕಾರ

# ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ ಹಂಪಸಾಗರ,

**ಸಂ.ಕಂ.ಪಹಣಿ/ವಿವಾದ/02/2016–17**

0.5.5.16

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಶಿವಲಿಂಗಪ್ಪ ಬೆಂಡಾಲಿ | ಶ್ರೀಮತಿ ವನಜಾಕ್ಷಿ |
| ತಂದೆ ಕಾಳಪ್ಪ ಬೆಂಡಾಲಿ | ಗಂಡ ಚನ್ನಬಸಪ್ಪ |
| ಗ್ರಾಮ : ಸೊನ್ನ | ಗ್ರಾಮ : ಸೊನ್ನ |

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 228 ವಿಸ್ತೀರ್ಣ 03–09 ಎಕರೆ ಜಮೀನು ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು–ವಿಚಾರಣೆ.**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 228 ಪೈಕಿ ವಿಸ್ತೀರ್ಣ 03–09 ಎಕರೆ ಜಮೀನು ಕ್ರಯಪತ್ರ ಸಂಖ್ಯೆ ಹೆಚ್‌ಬಿಹೆಚ್–1–04124/2015–16/ದಿನಾಂಕ: 22–02–2016 ರಂದು ಹಾಲಿ ಪಹಣಿ ಲೆಕ್ಕದಾಖಲು ತೊಗಲೇರಿ ಕಾಳಪ್ಪ ಇವರಿಂದ ವಾದಿಗಳು ಕ್ರಯಕ್ಕೆ ಹೊಂದಿರುತ್ತಾರೆ. ಹಾಗೂ ಜಮೀನು ಪೈಕಿ ನಂಬರ್ ಇರುವುದರಿಂದ ಕ್ರಯಪೂರ್ವದಲ್ಲಿ ತಾಲೂಕಾ ಮೋಜಣಿ ಶಾಖೆಯಿಂದ 11–ಇ ನಕ್ಷೆ ಸಂಖ್ಯೆ 12020415507986001 ದಿನಾಂಕ: 16–02–2016 ರಂತೆ ಹೊಂದುತ್ತ ಕ್ರಯ ವ್ಯವಹಾರವು ನಡೆದಿರುತ್ತದೆ. ಸದ್ರಿ ವ್ಯವಹಾರವು ತಾಲೂಕಾ ಭೂಮಿ ಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 92 ಹಾಗೂ ಹಕ್ಕು ಬದಲಾವಣೆ ಸಂಖ್ಯೆ ಹೆಚ್–39/2015–16 ರಂತೆ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಪ್ರಕರಣದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಮುಂದಿನ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಪ್ರಕರಣದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಗ್ರಾಮ ಲೆಕ್ಕಾಧಿಕಾರಿ ಸೊನ್ನ ಇವರಿಂದ ಜಾರಿಗೊಳಿಸಲಾಗಿರುತ್ತದೆ. ಜಾರಿ ಮಾಡಲಾಗಿ ಪ್ರಕರಣಕ್ಕೆ ಪ್ರತಿವಾದಿಗಳು ಭೂಮಿ ಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 6425/2015–16 ರಂತೆ ತಕರಾರು ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಕಲಿಕೊಂಡು ದಿನಾಂಕ:12–04–2016 ರಿಂದ ದಿನಾಂಕ: 05–05–2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಪ್ರತಿವಾದಿಗಳು ಹಾಜರಾಗಿರುತ್ತಾರೆ.

13/05/16

ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಜಮೀನು ಹಾಲೀ ಲೆಕ್ಕ ದಾಖಲು ತೊಗಲೇರಿ ಕಾಳಪ್ಪ ಇವರ ಹೆಸರಿನಲ್ಲಿದ್ದು ಇವರು ಈ ಜಮೀನಿನ ಒಟ್ಟು 7–09 ಎಕರೆಯಲ್ಲಿ 3–09 ಎಕರೆ ಜಮೀನನ್ನು ಕ್ರಯಪತ್ರ ಸಂಖ್ಯೆ ಹೆಚ್‌ಬಿಹೆಚ್–1–04124/2015–1/ ದಿನಾಂಕ: 22–02–2016 ರಂದು ನಿಯಮಾನುಸಾರ 11–ಇ ನಕ್ಷೆ ಹೊಂದುತ್ತಾ ಮತ್ತು ಸದರಿ ಜಮೀನು ಪರಸನಲ್ ಇನಾಂ ಜಮೀನು ಇದ್ದು ಇದಕ್ಕೆ ಮಾನ್ಯ ತಹಶೀಲ್ದಾರರವರಿಂದ ಹಿಂಬರಹಪತ್ರ ಸಂಖ್ಯೆ ಕಂ/ಭೂಮಿ/ಪರವಾನಿಗೆ/08/2012–13/ದಿನಾಂಕ : 05–02–2012 ರಂತೆ ಜಮೀನು ಮಾರಾಟ ಮಾಡುವ ಬಗ್ಗೆ ಪರವಾನಿಗೆ ಅಗತ್ಯ ಇರುವುದಿಲ್ಲ ಎಂಬ ಹಿಂಬರಹ ಪತ್ರ ಪಡೆಯುತ್ತಾ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ. ಕ್ರಯ ವ್ಯವಹಾರವು ನಿಯಮಾನುಸಾರ ಶುದ್ಧ ಕ್ರಯಪತ್ರವಾಗಿರುತ್ತದೆ.

ಪ್ರತಿವಾದಿಗಳು ತಮ್ಮ ಲಿಖಿತ ತಕರಾರು ಸಲ್ಲಿಸಿದ್ದು ತಕರಾರು ಪತ್ರ ಪರಿಶೀಲಿಸಲಾಗಿ ಇದರಲ್ಲಿ "ಸದ್ರಿ ಜಮೀನಿನ ಮೇಲೆ ಯಾರಾದರೂ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ ಪಕ್ಷದಲ್ಲಿ ತಕ್ಷಣ ನನ್ನ ಗಮನಕ್ಕೆ ತರಲು ಕೋರುತ್ತೇನೆ" ಎಂದು ಉಲ್ಲೇಖಿಸಿರುವರು. ಈ ಪ್ರಕಾರ ಪ್ರತಿವಾದಿಗಳ ಕೋರಿಕೆಯಂತೆ ಈ ನ್ಯಾಯಾಲಯದಿಂದ ನೋಟೀಸಿನ ಮೂಲಕ ವ್ಯವಹಾರ ಕುರಿತು ಮಾಹಿತಿ ನೀಡಲಾಗಿರುತ್ತದೆ. ಆದರೆ ತಕರಾರು ಪತ್ರದಲ್ಲಿ ಉದ್ದೇಶ ಹಾಗೂ ಇನ್ನಿತರೆ ವಾರಸು ವಿವರ ಇತ್ಯಾದಿಗಳ ಬಗ್ಗೆ ಉಲ್ಲೇಖಿಸಿರುವುದಿಲ್ಲ. ಆದ್ದರಿಂದ ತಕರಾರು ಅರ್ಜಿಯು ಮಾನ್ಯತೆ ಹೊಂದಿರುವುದಿಲ್ಲ. ಹಾಗೂ ಕ್ರಯ ವ್ಯವಹಾರವು ಸರ್ಕಾರದ ಮುಖಾಂತರ ನೊಂದಣಿ ಕಛೇರಿಯಲ್ಲಿ ಕ್ರಯ ಹೊಂದಿರುವುದರಿಂದ ದಾಖಲೆಗಳು ಪೂರಕವಾಗಿರುವುದರಿಂದಲೂ ಪ್ರತಿವಾದಿಗಳು ಸಲ್ಲಿಸಿರುವ ತಕರಾರು ಹುರುಳಿಲ್ಲದ ತಕರಾರು ಆಗಿರುತ್ತದೆ. ಹಾಗೂ ಪ್ರತಿವಾದಿಗಳು ತಾವು ಈ ಜಮೀನಿನಲ್ಲಿ ಹಕ್ಕು ಹೊಂದಿದ್ದೇ ಆದರೆ ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಪ್ರಶ್ನಿಸಿಕೊಳ್ಳಲು ನಿರ್ದೇಶನ ನೀಡುತ್ತ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಆಲೂಕು, ಹಂಪಸಾಗರ ಹೋಬಳಿ, ಸೊನ್ನ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 228 ಪೈಕಿ ವಿಸ್ತೀರ್ಣ 03–09 ಎಕರೆ ಜಮೀನನ್ನು ಕ್ರಯದಸ್ತಾವೇಜು ಸಂಖ್ಯೆ ಹೆಚ್‌ಬಿಹೆಚ್–1–04124/ 2015–16/ ದಿ:22–02–2016 ರಂತೆ ಕ್ರಯದಾರರಾದ ಶ್ರೀ ಬೆಂಡಾಲಿ ಶಿವಲಿಂಗಪ್ಪ ತಂದೆ ಕಾಳಪ್ಪ ಇವರ ಹೆಸರಿನಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 128 ಹಾಗೂ 129 ರನ್ವಯ ಜಂಟಿಯಾಗಿ ಹಕ್ಕು ಬದಲಾವಣೆ ಮಂಜೂರು ಮಾಡಿ ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 05–05–2016 ರಂದು ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ, ಹಂಪಸಾಗರ

ಪ್ರತಿಯನ್ನು :–

1) ವಾದಿ ಮತ್ತು ಪ್ರತಿವಾದಿಗಳಿಗೆ ನ್ಯಾಯವಾದಿಗಳ ಮುಖೇನ
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ ಮುಂದಿನ ಕ್ರಮಕ್ಕಾಗಿ
3) ಹೆಚ್ಚುವರಿ ಪ್ರತಿ ಕಡತಕ್ಕೆ